## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2012-13ನೇ ಸಾಲಿಗೆ ಕೇಂದ್ರ ಪುರಸ್ಕೃತ ಯೋಜನೆಯಡಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. ಕೇಂದ್ರ ಸರ್ಕಾರದ ಪತ್ರಸಂಖ್ಯೆ:20014/13/2012/ ಎಜುಕೇಷನ್, ದಿನಾಂಕ:30.11.2012

2. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಇವರ ಪತ್ರಸಂಖ್ಯೆ: ಪವಕನಿ:ಇಡಿ:4: ಸಿಆರ್-2:2012-13,ದಿನಾಂಕ: 8-01-2013.

********

ಪ್ರಸ್ತಾವನೆ:

ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಮಂತ್ರಾಲಯವು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ:30.11.2012ರ ಪತ್ರದಲ್ಲಿ 2012-13ನೇ ಸಾಲಿಗೆ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಂಜೂರಾತಿಗಾಗಿ ರೂ.1008.21 ಲಕ್ಷಗಳು, ಬುಕ್‌ಬ್ಯಾಂಕ್‌ಗಾಗಿ ರೂ. 34.66 ಲಕ್ಷಗಳು ಮತ್ತು 2011-12ನೇ ಸಾಲಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮತ್ತು ಬುಕ್‌ಬ್ಯಾಂಕ್‌ಗಾಗಿ ರೂ. 1042.87 ಲಕ್ಷಗಳು ಒಟ್ಟು ರೂ.10,42,87,000/-ಗಳನ್ನು ಬಿಡುಗಡೆ ಮಾಡಿರುತ್ತದೆ. ಈ ಮೊತ್ತವು ದಿನಾಂಕ:30.11.2012 ರಂದು ರಾಜ್ಯ ಸರ್ಕಾರಕ್ಕೆ ಜಮೆಯಾಗಿರುತ್ತದೆ.

ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ(2)ರಲ್ಲಿನ ದಿನಾಂಕ:08.01.2013ರ ಪತ್ರದಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಮಂಜೂರಾತಿಗಾಗಿ ಬಿಡುಗಡೆಯಾಗಿರುವ 2ನೇ ಹಾಗೂ ಅಂತಿಮ ಕಂತಿನ ರೂ.1008.21 ಲಕ್ಷಗಳನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

### ಸರ್ಕಾರಿ ಆದೇಶ ಸಂಖ್ಯೆ: ಸಕಇ 153 ಪವಯೋ 2012, ದಿನಾಂಕ:28-02-2013

2012-13ನೇ ಸಾಲಿಗೆ ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ಭಾರತ ಸರ್ಕಾರವು 2ನೇ ಹಾಗೂ ಅಂತಿಮ ಕಂತಾಗಿ ಮಂಜೂರು ಮಾಡಿರುವ ರೂ.1008.21 ಲಕ್ಷಗಳನ್ನು (ಹತ್ತು ಕೋಟಿ ಎಂಟು ಲಕ್ಷದ ಇಪ್ಪತ್ತೊಂದು ಸಾವಿರ ರೂಪಾಯಿಗಳು ಮಾತ್ರ) ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿರುವಂತೆ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿ ಆದೇಶಸಲಾಗಿದೆ.

ಈ ಸಂಬಂಧದ ವೆಚ್ಚವನ್ನು 2012-13ನೇ ಸಾಲಿನ ಜಿಲ್ಲಾವಲಯ ಯೋಜನಾ ಲೆಕ್ಕಶೀರ್ಷಿಕೆ 2225-02-197-6-03 (ಯೋಜನೆ) ಅಡಿ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಲು ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಇವರಿಗೆ ಬಿಡುಗಡೆಗೊಳಿಸಲಾಗಿದೆ.

ಈ ಉದ್ದೇಶಕ್ಕಾಗಿ ಬಿಡುಗಡೆಯಾದ ಅನುದಾನವನ್ನು ಉದ್ದೇಶಿತ ಕಾರ್ಯಕ್ರಮಕ್ಕೆ ಪೂರ್ಣವಾಗಿ ಬಳಕೆ ಮಾಡಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.



ಪ್ರ.ತಿ.ನಿ

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಸಕಾಕ 40 ಆಂಆಸ 2013, ದಿನಾಂಕ:15-02-2013ರಲ್ಲಿ ನೀಡಿದ ಸಹಮತಿಯ ಮೇರೆಗೆ ಹಾಗೂ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 04ಟಿಎಫ್‌ಪಿ2012, ದಿನಾಂಕ:27-06-2012ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ

(ವಿ.ರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-3
ಸಮಾಜ ಕಲ್ಯಾಣ ಇಲಾಖೆ.

<u>ಇವರಿಗೆ:</u>

1) ಮಹಾಲೇಖಪಾಲರು, (ಎ ಮತ್ತು ಇ) (ಲೆಕ್ಕಪರಿಶೋಧನೆ-2)ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಕೃಷಿಭವನ, ಬೆಂಗಳೂರು.
3) ಎಲ್ಲಾ ಜಿಲ್ಲಾಧಿಕಾರಿಗಳು.
4) ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
5) ಎಲ್ಲಾ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ.

(3–5: ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಇವರ ಮುಖಾಂತರ)

6) ಉಪನಿರ್ದೇಶಕರು, ಖಜಾನೆ ಗಣಕ ಜಾಲ, ಖನಿಜಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
7) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8) ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
9) ಶಾಖಾ ರಕ್ಷಾ ಕಡತ.
10) ಹೆಚ್ಚುವರಿ ಪ್ರತಿ

ಸರ್ಕಾರದ ಆದೇಶ ಸಂಖ್ಯೆ:ಸಕಇ 153 ಪವಯೋ 2012 ದಿನಾಂಕ: 22-02-2013

ಅನುಬಂಧ

2012-13ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಯೋಜನೆಯಡಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನದ 2ನೇ ಹಾಗೂ ಅಂತಿಮ ಕಂತಿನ ಅನುದಾನದ ವಿವರಗಳು

(ರೂ.ಲಕ್ಷಗಳಲ್ಲಿ)

| ಅಬ್ಜೆಕ್ಟೀವ್ ಕೋಡ್ | ಜಿಲ್ಲೆಗಳು | ಬಿಡುಗಡೆ ಮಾಡಲಾದ ಮೊತ್ತ |
|---|---|---|
| 401 | ಬೆಂಗಳೂರು (ನ) | 168.54 |
| 402 | ಬೆಂಗಳೂರು (ಗ್ರಾ) | 14.10 |
| 404 | ಕೋಲಾರ | 26.40 |
| 405 | ಶಿವಮೊಗ್ಗ | 30.00 |
| 406 | ತುಮಕೂರು | 78.00 |
| 451 | ದಾವಣಗೆರೆ | 70.00 |
| 452 | ರಾಮನಗರ | 2.00 |
| 453 | ಚಿಕ್ಕಬಳ್ಳಾಪುರ | 9.99 |
| 407 | ಮೈಸೂರು | 46.00 |
| 408 | ಚಿಕ್ಕಮಗಳೂರು | 0.40 |
| 409 | ದಕ್ಷಿಣಕನ್ನಡ | 35.00 |
| 410 | ಹಾಸನ | 16.00 |
| 411 | ಕೊಡಗು | 2.00 |
| 412 | ಮಂಡ್ಯ | 15.00 |
| 457 | ಉಡುಪಿ | 22.00 |
| 413 | ಬೆಳಗಾಂ | 100.00 |
| 414 | ಬಿಜಾಪುರ | 12.00 |
| 415 | ಧಾರವಾಡ | 50.00 |
| 416 | ಉತ್ತರಕನ್ನಡ | 7.73 |
| 461 | ಬಾಗಲಕೋಟೆ | 30.00 |
| 462 | ಗದಗ್ | 28.00 |
| 463 | ಹಾವೇರಿ | 25.00 |
| 417 | ಗುಲ್ಬರ್ಗಾ | 20.00 |
| 418 | ಬಳ್ಳಾರಿ | 43.85 |
| 419 | ಬೀದರ್ | 46.20 |
| 420 | ರಾಯಚೂರು | 70.00 |
| 421 | ಯಾದಗೀರ್ | 20.00 |
| 466 | ಕೊಪ್ಪಳ | 20.00 |
| | **ಒಟ್ಟು** | **1008.21** |

(ಹತ್ತು ಕೋಟಿ ಎಂಟು ಲಕ್ಷಗಳ ಇಪ್ಪತ್ತೊಂದು ಸಾವಿರ ರೂಪಾಯಿಗಳು ಮಾತ್ರ)

(ವಿ.ರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-3
ಸಮಾಜ ಕಲ್ಯಾಣ ಇಲಾಖೆ